ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಇಪ್ಪತ್ತು ಅಂಶ ಕಾರ್ಯಕ್ರಮ ಸಮನ್ವಯ ಸಭೆಯಲ್ಲಿ ಚರ್ಚಿಸಲಾಗಿದ್ದು, ಸುಣ್ಣದ ಗೂಡುಗಳನ್ನು ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ಮಂಡಳಿಯ ಮಂಗಳೂರು ಪ್ರಾದೇಶಿಕ ಕಛೇರಿಯ ಉಪ ಪರಿಸರ ಅಧಿಕಾರಿಗಳು ದಿನಾಂಕ 23-6-94ರಂದು ಜಿಲ್ಲಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳಲು ವರದಿ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು ಈ ವಿಷಯವನ್ನು ಸಹಾಯಕ ಆಯುಕ್ತರು, ಮಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ ನಿರ್ದೇಶಿಸಿದ್ದಾರೆ. ಅಂತೆಯೆ ಸಹಾಯಕ ಆಯುಕ್ತರು ಹಾಗೂ ಉಪ-ವಿಭಾಗೀಯ ದಂಡಾಧಿಕಾರಿ, ಮಂಗಳೂರು ಇವರು ದಿನಾಂಕ 1-8-94ರಂದು ಕ್ರಿಮಿನಲ್ ಪ್ರೊಸೀಜರ್ ಕೋಡ್ ಕಲಂ 133ರ ಪ್ರಕಾರ ಸದರಿ ಸುಣ್ಣದ ಗೂಡಿನ ಮಾಲೀಕರಿಗೆ ಇನ್ನು ಏಳು ದಿನಗಳಲ್ಲಿ ಅವರ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಆದೇಶ ನೀಡಿ ಈ ಆದೇಶವನ್ನು ಏಕೆ ಖಾಯಂಗೊಳಿಸಬಾರದೆಂಬುದಕ್ಕೆ ಕಾರಣ ತೋರಿಸಲು ದಿನಾಂಕ 8-8-94ರಂದು ಅವರ ಉಪ ವಿಭಾಗ ದಂಡಾಧಿಕಾರಿ ನ್ಯಾಯಾಲಯದ ಮುಂದೆ ಹಾಜರಾಗಲು ನಿರ್ದೇಶಿಸಿರುತ್ತಾರೆ. ಸದರಿ ಪ್ರಕರಣವು ಇನ್ನು ಇತ್ಯರ್ಥವಾಗಬೇಕಾಗಿದೆ. ಈ ಪ್ರಕರಣದಲ್ಲಿ ಉಪ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರ ಮಂಡಳಿ, ಮಂಗಳೂರು, ಇವರು ಫಿರ್ಯಾದಿಯಾಗುದ್ದಾರೆ. ಈ ವಿಷಯವನ್ನು ತ್ವರಿತವಾಗಿ ಇತ್ಯರ್ಥಗೊಳಿಸುವಂತೆ ನ್ಯಾಯಾಲಯದಲ್ಲಿ ಒತ್ತಾಯಿಸಲಾಗುವುದು.

ಸುರತ್ಕಾಲ್ ನಗರ ಪ್ರದೇಶದ ಸ್ವಚ್ಛತೆ ಬಗ್ಗೆ

ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಾಲ್) : ಮಾನ್ಯ ಅಧ್ಯಕ್ಷರೇ, ಸುರತ್ಕಾಲ್‌ನಗರ ಪ್ರದೇಶವು ಜನಸಂದಣಿ ಇರುವ ಪ್ರದೇಶವಾಗಿದ್ದು ನಗರ ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಯು ಹಾದು ಹೋಗುತ್ತದೆ. ಸದಾ ಜನ ಸಂಚಾರವಿರುವ ಈ ಪ್ರದೇಶದಲ್ಲಿನ ಮೂರು ಹೋಟೆಲ್‌ಗಳಲ್ಲಿನ ಮಲೀನ ನೀರು ಮತ್ತು ಅದರೊಂದಿಗೆ ಆ ಪ್ರದೇಶದಲ್ಲಿನ ಶೌಚಾಲಯದ ಕೊಳಚೆ ನೀರು ಸೇರಿ ರಸ್ತೆ ತುಂಬಾ ಹರಿದು ಹೋಗುತ್ತಿರುವುದರಿಂದಾಗಿ ಜನರು ರಸ್ತೆಯಲ್ಲಿ ನಡೆದಾಡಲು ಆಗದ ಪರಿಸ್ಥಿತಿಯು ಉದ್ಭವಿಸಿದೆ. ಈ ಕುರಿತಾಗಿ ಜಿಲ್ಲಾಧಿಕಾರಿಗಳು ಮತ್ತಿತರ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಇತ್ಯಾದಿಗಳ ಮೂಲಕ ಗಮನ ಸೆಳೆದಿದ್ದರೂ ಅದರಿಂದ ಯಾವುದೇ ಪ್ರಯೋಜನವಾಗದೆ ಜನರು ನರಕಯಾತನೆಯನ್ನು ಅನುಭವಿಸುವಂತಾಗಿದೆ. ಸಾರ್ವಜನಿಕ ಆರೋಗ್ಯಕ್ಕೆ ಧಕ್ಕೆ ತರುವ ಈ ಕೊಳಚೆ ನೀರನ್ನು ನಿಲ್ಲಿಸುವಂತೆ ಪುರಸಭೆಗೆ ಮುತ್ತಿಗೆ, ಅಧಿಕಾರಿಗಳಿಗೆ ಬಹಿಷ್ಕಾರ ಮುಂತಾದ ಪ್ರತಿಭಟನೆಗಳು ನಡೆಯುತ್ತಿವೆ. ಜನರು ತಮ್ಮ ಮನೆಗಳಲ್ಲಿ ಈ ದುರ್ವಾಸನೆಯಿಂದಾಗಿ ವಾಸಿಸುವುದೇ ದುಸ್ತರವಾಗಿದೆ. ಆದ್ದರಿಂದ ಸಾರ್ವಜನಿಕರು ಬೀದಿಗಳಿಯುವ ಮೊದಲು ಈ ಕೊಳಚೆ ನೀರು ಹಾಯುವುದನ್ನು ನಿಲ್ಲಿಸಲು ಖಾಯಂ ಪರಿಹಾರದ ವ್ಯವಸ್ಥೆಯನ್ನು ಮಾಡಲು ಸಕಾಲಿಕ ವ್ಯವಸ್ಥೆಯನ್ನು ತುರ್ತಾಗಿ ಸರಕಾರದವರು ಮಾಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ವರದಿಯನ್ನು ಕೊಡುವುದಕ್ಕೆ ನಾನು ಈಗಾಗಲೇ ಆದೇಶವನ್ನು ಮಾಡಿದ್ದೇನೆ.

ಬೆಂಗಳೂರು ಕಬ್ಬನ್ ಪಾರ್ಕ್‌ನಲ್ಲಿರುವ ಮಕ್ಕಳ ಗ್ರಂಥಾಲಯದ ಬಗ್ಗೆ

ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಮಕ್ಕಳ ಗ್ರಂಥಾಲಯವನ್ನು ಸ್ಥಾಪಿಸಿ ಈಗಾಗಲೇ ಹಲವಾರು ತಿಂಗಳುಗಳು ಕಳೆದಿದ್ದರೂ ಸಹ ಅದನ್ನು ಇನ್ನೂ ಮಕ್ಕಳ ಉಪಯೋಗಕ್ಕಾಗಿ ತೆರೆದಿರುವುದಿಲ್ಲ. ಆದ್ದರಿಂದ ಕೂಡಲೇ ಕಬ್ಬನ್ ಪಾರ್ಕಿನಲ್ಲಿ ಮಕ್ಕಳ ಗ್ರಂಥಾಲಯವನ್ನು